Mr. SPEAKER.—I shall examine and state the correct position.

ಶ್ರೀ ಎಸ್. ಬಂಗಾರಪ್ಪ (ಸೊರಬ).—ತಾವು ಪರಿಶೀಲನೆ ಮಾಡಬಹುದು. ಆದರೆ ಶ್ರೀ ಗುರೆಡ್ಡಿಯವರು ನೀತಿಗೆ ಸಂಬಂಧಪಟ್ಟ ವಿಚಾರದ ಮೇಲೆ ಪ್ರಶ್ನೆ ಕೇಳಿದ್ದಾರೆ. ಅದನ್ನು ಎಕ್ಸ್‌ಪಂಜ್ ಮಾಡಬೇಡಿ.

Mr. SPEAKER,—I do not remember. I will look into the record and then give my considered opinion. I shall see the rules and interpret it correctly.

Calling Attention to Matters of Urgent Public Importance

(i) *Robbery near Raichur.*

ಶ್ರೀ ಎಂ. ನಾಗಪ್ಪ.—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು ಎಂದರೆ, 1969ನೇ ಇಸವಿಯ ಫೆಬ್ರುವರಿ 24 ಅಥವಾ 25ರ ಮಧ್ಯದಲ್ಲಿ ರಾಯಚೂರಿನ ಬಳಿ ದರೋಡೆ ನಡೆದಿರುವ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

† Sri VEERENDRA PATIL (Chief Minister).—It is reported that no complaint has been lodged with the jurisdictional police about the alleged incident. It is further reported that Sri Gulappa, who was contacted by the Police, has stated that no such incident has taken place.

ಶ್ರೀ ಎಂ ನಾಗಪ್ಪ.—ಯಾವ ಸ್ಥಳದಲ್ಲಿ ದರೋಡೆ ನಡೆದಿದೆ ಎಂದು ಹೇಳಿದ್ದೀನೋ ಆ ಸ್ಥಳಕ್ಕೆ ನಾಲ್ಕೈದು ಮೈಲಿ ಹತ್ತಿರ ಶಿರವಾರ ಪೋಲೀಸ್ ಸ್ಟೇಷನ್ ಇದೆ. ಮತ್ತು ಆ ಸ್ಥಳದ ಹತ್ತಿರವೇ ಹಿಂದೆ 22 ಜನರು ಒಂದು ಕಣವನ್ನು ಲೂಟಿ ಮಾಡಿದ್ದಕ್ಕೆ ಈ ಕೇಸ್ ಸಂಬಂಧಪಟ್ಟಿದೆ. ಈ ಕೇಸ್ ರಿಜಿಸ್ಟರ್ ಆಗದಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಅದು ಇನ್ನೊಂದು ಕೇಸ್ ಇರಬಹುದು. ಈ ಕೇಸ್‌ನಲ್ಲಿ Gulappa of Hukrani, Taluk Manvi—ಎನ್ನುವವರು ಆ ರೀತಿಯಿಂದ ಅಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದಮೇಲೆ ನಾವು ಇನ್ನು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಗೊತ್ತಿಲ್ಲ.

(ii) *Scarcity of Water in some Villages in Jamkhandi Taluk*

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು ಎಂದರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದೀ ದಂಡೆಗಳ ಮೇಲಿನ ರಬಕವಿ—ಬನಹಟ್ಟಿ ಮತ್ತು ಇತರ ಗ್ರಾಮಗಳಲ್ಲಿ ನೀರಿನ ಅಭಾವವಿರುವ ವಿಚಾರವನ್ನು ಅಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

† Sri B. L. GOWDA (Deputy Minister for Co-operation).—There is no anxiety for drinking water in the nearby villages of Krishna River due to water scarcity in the Krishna River. Though the piped water supply to the twin towns of Rabakavi-Banahatti has been stopped from 10-2-1969 due to paucity of water in the river Krishna, the water requirement of these twin towns is being met from local private drinking water wells and Irrigation wells. However, to meet any possible emergency that may arise from May, 1969 to the end of June, 1969 action is being taken by the Executive Engineer, Public Health Engineering Division, Belgaum to prepare a scheme of pumping water from "Gulli Madavu" in the Krishna river at an estimated cost of